2003ರಲ್ಲಿ ಟೆಂಡರ್‌ಗಳನ್ನು ಕರೆಯಲಾಯಿತು. ಇದಕ್ಕೆ ಒಬ್ಬರು ಮಾತ್ರ ಸದರಿ ವಿದ್ಯುದೀಕರಣ ಕೆಲಸಕ್ಕೆ ಟೆಂಡರ್ ಹಾಕಿದುದರಿಂದ ಅದರ ಅನುಮೋದನೆಯಾಗಲಿಲ್ಲ. 87 ಉಪ ಗ್ರಾಮಗಳನ್ನು 3 ಭಾಗಗಳಾಗಿ ವಿಂಗಡಿಸಿ ಪುನ: ಟೆಂಡರ್‌ಗಳನ್ನು ಕರೆಯಲಾಗಿದ್ದು. ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಗುತ್ತಿದೆ.

ಈ) ಈ ಕಾಮಗಾರಿಯನ್ನು ಅರ್ಹ ಗುತ್ತಿಗೆದಾರರಿಗೆ ವಹಿಸುವ ಪ್ರಕ್ರಿಯೆಯು ಜಾರಿಯಲ್ಲಿದ್ದು. ಶೀಘ್ರವೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

610(356) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ–ಶ್ರೀರಂಗಪಟ್ಟಣ ರಸ್ತೆ ನಿರ್ಮಾಣವು ಕ.ರಾ.ರ.ಅ.ನಿ. ದಿಂದ ನಿರ್ಮಿಸುತ್ತಿರುವುದು ನಿಜವೆ;

ಆ) ಬೀದರ ಜಿಲ್ಲೆಯ ಹುಮನಾಬಾದ–ಬೀದರ ರಸ್ತೆಯು ಬಹಳಷ್ಟು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆಯ ದುರಸ್ತಿಗಾಗಿ ಬಾಲ್ಕಿಯಿಂದ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಜನರು ಸತ್ಯಾಗ್ರಹ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್–ಶ್ರೀರಂಗಪಟ್ಟಣ ರಸ್ತೆ ನಿರ್ಮಾಣವನ್ನು ವಿಶ್ವಬ್ಯಾಂಕ್ ನೆರವಿನಡಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (ಕ.ರಾ.ಹೆ.ಅ.ಯೋ) ತೆಗೆದುಕೊಳ್ಳಲಾಗಿದೆ.

ಆ) ಹುಮ್ನಾಬಾದ್–ಬೀದರ್ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು, ಇದರಲ್ಲಿ ಕಿಮೀ. 694.14 ರಿಂದ 694.64 ಬಹಳಷ್ಟು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ರಸ್ತೆಯ ದುರಸ್ತಿಗಾಗಿ ಬ್ಯಾಲಹಳ್ಳಿ ಸ್ಥಳೀಯ ಜನರು ದಿನಾಂಕ 11–6–2004ರಂದು ರಸ್ತೆ ತಡೆ ಮಾಡಿ ಒತ್ತಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಟೆಂಡರ್ ಕರಾರಿನ ಪ್ರಕಾರ ಈ ಮೈಲಿಗಲ್ಲು ರಸ್ತೆಯು ಜನವರಿ 2005ರಲ್ಲಿ ತೆಗೆದುಕೊಂಡು ಜನವರಿ 2006ರಲ್ಲಿ ಮುಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅಲ್ಲಿಯವರೆಗೆ, ರಸ್ತೆ ದುರಸ್ತಿ ಮಾಡಲಾಗುತ್ತಿದೆ. ಆದರೆ, ಕಿಮೀ. 694.14 ರಿಂದ 694.64 ಭಾಗದ ರಸ್ತೆಯು ಕಪ್ಪು ಮಣ್ಣಿನ ಭಾಗದಲ್ಲಿ (Black Cotton Soil) ಇದ್ದು ದುರಸ್ತಿ ಮಾಡಿದರೂ ನಿಲ್ಲುವ ಸಾಧ್ಯತೆಯಿಲ್ಲ. ಆದ್ದರಿಂದ ಈ ಕೆಟ್ಟಿರುವ ಭಾಗದ ರಸ್ತೆಯನ್ನು ಗುತ್ತಿಗೆದಾರರಿಂದ ಗುತ್ತಿಗೆ ವಿನ್ಯಾಸಗಳ ಪ್ರಕಾರ ಹೊಸ ರಸ್ತೆಯ ನಿರ್ಮಾಣವನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಮುಂದುವರೆದು ಹಾಲಿ ರಸ್ತೆಯ ಉಳಿದ ಆಯ್ದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

611(610) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿರುವ ಟಿ.ಸಿ.ಗಳು ಮೇಲಿಂದ ಮೇಲೆ ಸುಡುತ್ತಲಿದ್ದು, ಇದರಿಂದ ಕುಡಿಯುವ ನೀರಿಗೆ ಮತ್ತು ರೈತರ ಹೊಲಗಳಿಗೆ ಬಹಳಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೊಂದರೆಗೊಳಗಾದ ಜನರು ಟಿ.ಸಿ. ಸಲುವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಮುತ್ತಿಗೆ ಹಾಕಿ ಧರಣಿ ನಡೆಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ದಿನಾಂಕ 24-7-2004ಕ್ಕೆ ಇದ್ದಂತೆ 84 ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕಾಗಿದೆ. ಈ 84 ಟ್ರಾನ್ಸ್‌ಫಾರ್ಮರ್‌ಗಳಲ್ಲಿ 60 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿಸಿ ಅಳವಡಿಸಲಾಗಿರುತ್ತದೆ. ಉಳಿದ 24 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿ ಶೀಘ್ರದಲ್ಲಿಯೇ ಅಳವಡಿಸಲಾಗುವುದು.

612(611) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಹೊಸ 33 ಕೆ.ವಿ. ಸ್ಟೇಷನ್ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೆ;

ಆ) ಇದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಭಾಲ್ಕಿ ತಾಲ್ಲೂಕಿನಲ್ಲಿ ನಡೆಯುತ್ತಿರುವ "ಪ್ರಧಾನ ಮಂತ್ರಿ ವಿದ್ಯುತೀಕರಣ ಯೋಜನೆ"ಯ ಕಾಮಗಾರಿಗಳು ಯಾವ ಹಂತದಲ್ಲಿವೆ;

ಈ) ಈ ಯೋಜನೆ ಇನ್ನು ಎಷ್ಟು ಸಮಯದಲ್ಲಿ ಪೂರ್ಣ ಮಾಡುವ ಉದ್ದೇಶ ಇದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಭಾಲ್ಕಿ ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಹೊಸ 33/11 ಕೆ.ವಿ. ಸ್ಟೇಷನ್ ಸ್ಥಾಪನೆ ಮಾಡುವ ಉದ್ದೇಶ ಇದೆ.